ನಾಶ ಮಾಡಲು ತೀರ್ಮಾನಿಸಿದ್ದುದರ ಫಲವಾಗಿ. ಈ ವಿಕೃತ ಯೋಜನೆಯ ಮುಖ್ಯ ಸೂತ್ರದಾರ ಆಗಸ್ಟ್ ಹಿರ್ಟ್ ಎಂಬ ವೈದ್ಯ.

★★★

ಆಗಸ್ಟ್ ಹಿರ್ಟ್ ಒಬ್ಬ ನರಶಾಸ್ತ್ರಜ್ಞ. ಅದಕ್ಕೂ ಮಿಗಿಲಾಗಿ ಆತನೊಬ್ಬ SS ನಾಜಿ ಸಂಘದ, ಜನರಲ್ ಮತ್ತು ಕ್ಯಾಪ್ಟನ್ ಆಗಿದ್ದ. ಜರ್ಮನ್ನರು ಆರ್ಯರ ಬಗ್ಗೆ ಸಂಶೋಧಿಸಲು ಕಟ್ಟಿಕೊಂಡಿದ್ದ ಆಹ್ನೆನೆರ್ಬೆ (Ahnenerbe) ಎಂಬ ಸಂಘದ ಸದಸ್ಯ ಕೂಡ. ಅಂದರೆ ನಾಜಿ ನಂಬಿಕೆಗಳ ಕಟ್ಟಾ ಅನುಯಾಯಿ. ಯೆಹೂದಿಗಳನ್ನು ಸರ್ವನಾಶ ಮಾಡಿ, ಇಡೀ ಯುರೋಪನ್ನು ಅಥವಾ ಪ್ರಪಂಚವನ್ನೇ ಯೆಹೂದಿ ಮುಕ್ತವಾಗಿಸಬೇಕೆಂದು ನಾಜಿ ನಾಯಕರು ಸಕ್ರಿಯವಾಗಿ ಕಾರ್ಯನಿರತರಾಗಿದ್ದ ಕಾಲವದು. ನರಶಾಸ್ತ್ರಜ್ಞನಾಗಿದ್ದರೂ ಆಗಸ್ಟ್ ಹಿರ್ಟ್, ಸ್ಟ್ರಾಸ್‌ಬರ್ಗ್‌ನ ರೀಚ್ ವಿಶ್ವವಿದ್ಯಾಯಾಲಯದ ವೈದ್ಯಕೀಯ ಸಂಸ್ಥೆಯ ವಿಭಾಗದಲ್ಲಿ ಪ್ರಾಧ್ಯಾಪಕನಾಗಿ ಆಯ್ಕೆಯಾಗುತ್ತಾನೆ. ನಂತರ 1943ರಲ್ಲಿ ಆತ ಒಂದು ಯೋಜನೆ ತಯಾರಿಸುತ್ತಾನೆ. 'ಯೆಹೂದಿಗಳು ಸರ್ವನಾಶವಾಗುವುದು ಖಂಡಿತವಾಗಿರುವುದರಿಂದ, ಭವಿಷ್ಯದಲ್ಲಿ ಮಾನವಶಾಸ್ತ್ರಜ್ಞರಿಗೆ ಒಂದು ತೊಂದರೆ ಎದುರಾಗುವ ಸಾಧ್ಯತೆ ಇದೆ. ದೇಹ, ಮೂಳೆ ಮತ್ತು ಮೆದುಳಿನ ರಚನೆಯ ಅಧ್ಯಯನಕಾರರಿಗೆ ಕೆಳಮಾನವ ಜಾತಿಗೆ ಸೇರಿದ ಯೆಹೂದಿ ತಳಿಗಳ ಕಳೇಬರಗಳೇ ಸಿಗದೆ ಮಾನವ ಸಂಕುಲದಲ್ಲಿನ ಸಂಪೂರ್ಣ ವೈವಿಧ್ಯತೆಯನ್ನು ದಾಖಲಿಸಲು ಹಾಗೂ ಅಧ್ಯಯನ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಯೆಹೂದಿಗಳು ಸಂಪೂರ್ಣವಾಗಿ ನಾಶವಾಗುವ ಮುನ್ನವೆ ಈ ಬಗ್ಗೆ ಎಚ್ಚೆತ್ತು, ಅವರ ಕಳೇಬರಗಳನ್ನು, ಅಸ್ಥಿಪಂಜರಗಳನ್ನು ಮತ್ತು ಮೆದುಳುಗಳ ಮಾದರಿಗಳನ್ನು ಪ್ರಯೋಗಾಲಯಗಳಿಗೆ ಒದಗಿಸಿ ಸಂಗ್ರಹಿಸುವುದು ಅವಶ್ಯಕ' ಎಂದು ವಾದಿಸಿ, ಅದರಂತೆ ಒಂದು ಯೋಜನೆಯನ್ನು ತಯಾರಿಸಿ ಹಿಟ್ಲರ್‌ನ ಬಲಗೈ ಎಂದೂ, ಹಿಟ್ಲರ್‌ನ ನಂತರ ಅತ್ಯಂತ ಪ್ರಭಾವಶಾಲಿಯಾದ ಅಧಿಕಾರಿ ಎಂದೂ, ವರ್ಣಿಸಲಾಗಿರುವ ಹಿಮ್ಲರ್‌ಗೆ ಸಲ್ಲಿಸುತ್ತಾನೆ. ಈ ಯೋಜನೆಯ ಪ್ರಕಾರ, 79 ಯೆಹೂದಿ ಗಂಡಸರನ್ನೂ, 30 ಯೆಹೂದಿ ಹೆಂಗಸರನ್ನೂ, ಇಬ್ಬರು ಪೋಲಿಷರನ್ನು, ನಾಲ್ಕು ಏಷ್ಯಾ ಖಂಡದವರನ್ನೂ ಒಳಗೊಂಡು, ಒಟ್ಟಿಗೆ 115 ಜೀವಂತ ಯೆಹೂದಿಗಳನ್ನು ಸಾಯಿಸಿ ಅವರ ಕಳೇಬರಗಳನ್ನು ತನ್ನ ಪ್ರಯೋಗಶಾಲೆಗೆ ಸರಬರಾಜು ಮಾಡಬೇಕೆಂದೂ, ಆ ಕಳೇಬರಗಳಲ್ಲಿ ಕೆಲವನ್ನು ಯಥಾಸ್ಥಿತಿಯಲ್ಲಿಯೂ, ಕೆಲವುಗಳ ಮಾಂಸ ಸುಲಿದು ಅಸ್ಥಿಪಂಜರಗಳಾಗಿಯೂ ಸಂಗ್ರಹಿಸುವ ಜವಾಬ್ದಾರಿಯನ್ನು ತಾನು ಹೊರುವುದಾಗಿ ಸೂಚಿಸಿರುತ್ತಾನೆ. ತೀವ್ರ ಯೆಹೂದಿ ದ್ವೇಷಿಯಾಗಿದ್ದ ಹಿಮ್ಲರ್ ಯೆಹೂದಿಗಳನ್ನು ಪ್ರಯೋಗಾಲಯದಲ್ಲಿ ಕಪ್ಪೆ, ಜಿರಳೆಗಳನ್ನು ಜೀವಂತವಾಗಿ ಸಾಯಿಸಿ ಡಿಸೆಕ್ಟ್ ಮಾಡುವಂತೆ ಪರಿಷ್ಕರಿಸುವ ಈ ಯೋಜನೆಯನ್ನು ಮೆಚ್ಚಿ ಅನುಮತಿ ನೀಡುತ್ತಾನೆ. ಅದರಂತೆ ಮಾದರಿ ಯೆಹೂದಿಗಳನ್ನು ಆರಿಸುವ ಕಾರ್ಯವನ್ನು ಬ್ರುನೋ ಬೆಗರ್ ಎಂಬ ಮಾನವಶಾಸ್ತ್ರಜ್ಞನಿಗೆ ವಹಿಸಲಾಗುತ್ತದೆ. ಈ ಬ್ರುನೋ ಬೆಗರ್ ಚಿತ್ರವನ್ನೆ ನೀವು ಆರ್ಯ ಕಣಿವೆಯ ದಿಂಗ್ಸೆ ಅವರ ಕೊಠಡಿಯಲ್ಲಿ ನೋಡಿರುವುದು. ಬೆಗರ್ ಆಸ್ಕ್‌ವಿಜ್‌ನಲ್ಲಿದ್ದ ಯೆಹೂದಿ ಕೈದಿಗಳನ್ನು ಪರಿಶೀಲನೆಗೆ ಒಳಪಡಿಸಿ, 87 ಮಂದಿಯನ್ನು ಆರಿಸುತ್ತಾನೆ. ವಿಚಿತ್ರವೆಂದರೆ ಏಷ್ಯಾ ಖಂಡದ ರಕ್ತ ಹಂಚಿಕೊಂಡವರನ್ನೇಕೆ ಆರಿಸಬೇಕಿತ್ತು ಎಂದು ನಿಮಗೂ ಆಶ್ಚರ್ಯವಾಗಬಹುದು. ಅಲ್ಲಿಯೇ ಆಗಸ್ಟ್ ಹಿಟ್ಲರ್‌ನ ಈ ಯೋಜನೆಗೂ, ದಿಂಗ್ಸೆ ಅವರಿಗೂ, ಮತ್ತು ಆರ್ಯರ ಬಗ್ಗೆ ಬೆಗರ್‌ಗಿದ್ದ